
## ಪದಬಂಧ



ಎಡದಿಂದ ಬಲಕ್ಕೆ

| | | |
|---|---|---|
| 1. | ಸಂಭಾವಿತರ ಕಥೆಗಳೆಲ್ಲ ನೈಸರ್ಗಿಕವಾಗಿಯೇ ಇರುತ್ತವೆ, ಬಿಡಿ | 4 |
| 3. | ವ್ಯಾಯಾಮವನ್ನು ಆರಂಭಿಸಿದ್ದು ಪಕ್ಷದ ಒಂಬತ್ತನೇ ದಿನ | 3 |
| 4. | ರಾಜನ ಕಾರ್ಯಕ್ಕೆ ನಿಯೋಜಿತನಾಗಿರುವವ ಒಬ್ಬ ಮಡಿವಾಳ | 3 |
| 6. | ತಾವರೆಯನ್ನು ತಂದು ಮುಡಿಸುವ ಕೆಲಸವನ್ನು ಶೀಘ್ರಗೊಳಿಸು | 4 |
| 7. | ಭುಜದ ಮೇಲಿಟ್ಟು ಕೈ ಸೇರಿಸಿ ಹಿಡಿದದ್ದು ಸೌತೆ ಜಾತಿಯ ಹಣ್ಣು | 4 |
| 9. | ಅಜ್ಜ ಇಲಿಯಂತಾಗಿ ಆನೆಯ ಜೊತೆಗೆ ನಿಂತರೆ ಹೇಗೆ? | 4 |
| 11. | ಪಾತಾಳದಾಳದಿಂದ ನಿರ್ಮಿಸಲಾಗಿರುವ ಭದ್ರ ಬುನಾದಿ | 4 |
| 13. | ನೂರು ಲಕ್ಷ ಬಿಲ್ಲುಗಳು ಒಟ್ಟಾಗಿರುವ ಕಡಲ ತೀರದ ಪುಣ್ಯಕ್ಷೇತ್ರ | 4 |
| 15. | ಆ ಕಾರಿನಲ್ಲಿ ಕೂತವನ ಜೊತೆಗಾರ ಒಬ್ಬ ಗುಮಾಸ್ತ | 4 |
| 17. | ಯಾತನೆಯನ್ನು ಕುಗ್ಗಿಸುವ ಪ್ರಯತ್ನ ಹೇಗೆ? | 3 |
| 18. | ಹರಕು ಧರಿಸಿ ಪ್ರವೇಶಿಸಹೋದರೆ ಗುಹೆಯೇ ಹಿಂದುಮುಂದು | 3 |
| 19. | ಅನುಕೂಲಕರ ನೆಲೆ ಇದೊಂದೇ ಮನುಷ್ಯರ ಪ್ರಪಂಚ | 4 |

ಮೇಲಿನಿಂದ ಕೆಳಕ್ಕೆ

| | | |
|---|---|---|
| 1. | ಸಾಮಾನ್ಯರ ಹಿತವನ್ನು ಕಾಪಾಡುವುದೇ ನಿಜವಾದ ಒಡೆತನ | 3 |
| 2. | ಕಂಡರಿಯದಂಥ ಆಜ್ಞೆಯ ಕಚ್ಚಾ ಪ್ರತಿ ಇದು | 3 |
| 3. | ಸೀಬೆ ಹಣ್ಣಿನ ರಾಶಿಯೇ ಲಭಿಸಿದ್ದು ಆತನ ಅದೃಷ್ಟ | 3 |
| 5. | ಕಾಜಾಣ ಹಕ್ಕಿಯ ಸನಿಹದಲ್ಲೇ ಭಯಂಕರ ಕುಟುಕುವ ಕೀಟ | 3 |
| 7. | ಅಲ್ಲಿ ಕೇವಲ ಶೀತವಷ್ಟೇ ಅಲ್ಲ, ಎಲ್ಲವೂ ಕಲ್ಮಷ ಭರಿತ ಕೂಡ | 4 |
| 8. | ಜಯಶೀಲರನ್ನೆಲ್ಲ ಕರೆದುತೋರಿಸಿದ್ದು ಬೃಹತ್ ಜಲಸಂಗ್ರಹಾಗಾರ | 4 |
| 9. | ಅಂಧನೊಡನೆ ಆಕೆಯದು ಸುಭದ್ರ ಸ್ನೇಹ | 4 |
| 10. | ಜಟ್ಟಿಯನ್ನೇ ತಡೆದು ನಿಲ್ಲಿಸಿ ಇದೇನು ಪಟ ಪಟ ಬಡಿದಾಟ? | 4 |
| 12. | ಪುಣ್ಯ ಕಥೆಯನ್ನು ಕೇಳಿದ ನಂತರ ಕುಡಿಯಲು ಸಿಹಿ ಪೇಯ | 3 |
| 14. | ಕಾರನ್ನು ಅಡ್ಡಗಟ್ಟಲು ಇಟ್ಟ ಕಲ್ಲುಗಳನ್ನು ಪುಡಿ ಮಾಡು | 3 |
| 15. | ಆಳ ಕೊರಕಲನ್ನು ಸಂಪೂರ್ಣ ಆವರಿಸಿದೆ ಈ ಅಡವಿ | 3 |
| 16. | ನೇಕಾರನ ಕಲ್ಪನೆಯಲ್ಲಿ ಪರಲೋಕದ ಕ್ರೂರ ಶಿಕ್ಷಾ ತಾಣ | 3 |

### 25—08—2022 ಉತ್ತರಗಳು

ಎಡದಿಂದ ಬಲಕ್ಕೆ

1. ಅನುಗ್ರಹ 3. ಸಮಗ್ರ 4. ಸಿಡುಕ 6. ಜಹಾಂಗೀರು 7. ವೇತನ 9. ಹುಲುಸು 11. ದಹಿಸು 13. ಸುಮುಖಿ 15. ಒಡಿವಾರ 17. ದುರುಳ 18. ಗಡಸು 19. ಸುರಿಮಳೆ

ಮೇಲಿನಿಂದ ಕೆಳಕ್ಕೆ

1. ಅಗ್ರಜ 2. ಹಸಿರು 3. ಸಹಿತ 5. ಕಡಲು 7. ವೇಣುನಾದ 8. ನಮೂದಿಸು 9. ಹುಡುಕಿಸು 10. ಸುಖದುಃಖ 12. ಹಿರಿದು 14. ಮುನಿಸು 15. ಬಳಸು 16. ರಗಳೆ

ಪ್ರಶ್ನಾಂಕಣ

# ಮೊನಾರ್ಕ್ ಚಿಟ್ಟೆ: ಏನು ಅದ್ಭುತ?

ಮೊನಾರ್ಕ್ (Monarch), ಅದು ಸಾಮಾನ್ಯ ಗಾತ್ರದ, ಸಾಧಾರಣ ರೆಕ್ಕೆ ವಿಸ್ತಾರದ, ಗಾಢ ಹಳದಿ ಕಪ್ಪು ವರ್ಣ ವಿನ್ಯಾಸದ ಒಂದು ಚಿಟ್ಟೆ (ಚಿತ್ರ1 ನೋಡಿ). ಯು.ಎಸ್.ಎ ಮತ್ತು ಕೆನಡ ದೇಶಗಳ ನಡುವಣ ಗಡಿ ಪ್ರದೇಶ ಈ ಪಾತರಗಿತ್ತಿಗಳ ಪ್ರಧಾನ ನೆಲೆ. ಮೇಲ್ನೋಟಕ್ಕೆ ಏನೂ ವಿಶೇಷ ಎನಿಸದ ಈ ಚಿಟ್ಟೆಯ ಬದುಕಿನ ಕ್ರಮ ಮಾತ್ರ ಬೇರಾವ ಚಿಟ್ಟೆ ಪ್ರಭೇದಕ್ಕೂ ಹೋಲಿಸಲಾಗದಷ್ಟು ವಿಭಿನ್ನ, ವಿಶಿಷ್ಟ ಮತ್ತು ವಿಸ್ಮಯ ಭರಿತ. ಅದಕ್ಕೇ ಈ ಚಿಟ್ಟೆಗೆ 'ಚಕ್ರವರ್ತಿ' (ಮೊನಾರ್ಕ್) ಎಂಬ ಪರಮೋನ್ನತ ಅಭಿಧಾನ.

ಮೊನಾರ್ಕ್ ಚಿಟ್ಟೆಗಳ ಮಹದದ್ಭುತದ ಸಂಕ್ಷಿಪ್ತ ಪರಿಚಯ

ಮೊನಾರ್ಕ್ ಚಿಟ್ಟೆಗಳು ಪ್ರತಿವರ್ಷ ಸೆಪ್ಟೆಂಬರ್ ತಿಂಗಳಲ್ಲಿ ತಮ್ಮ ಮೂಲ ನೆಲೆಯಾದ ಯು.ಎಸ್.ಎ ಯ ಉತ್ತರದಂಚಿನಿಂದ, ಅಲ್ಲಿನ ಅಸಹನೀಯ ಚಳಿಯಿಂದ ದೂರವಿರಲು ದಕ್ಷಿಣದ ಮೆಕ್ಸಿಕೊ ದೇಶದ ಕಡೆಗೆ ಮಿಲಿಯಾಂತರ ಸಂಖ್ಯೆಗಳಲ್ಲಿ, ಗುಂಪು ಗುಂಪಾಗಿ, ಆಗಸದಲ್ಲಿ ತೇಲುವ ಬೃಹತ್ ಮೋಡಗಳಂತೆ ವಲಸೆ ಪಯಣ ಕೈಗೊಳ್ಳುತ್ತವೆ. ಸುಮಾರು 4,800 ಕಿ.ಮೀ. ದೂರದ ಈ ಪಯಣದ ಹಾದಿಯುದ್ದಕ್ಕೂ ಹೂಗಳ ಮಕರಂದ ಹೀರುತ್ತ, ಶಕ್ತಿ ಸಂಗ್ರಹಿಸುತ್ತ, ಇರುಳಲ್ಲಿ ವಿರಮಿಸುತ್ತ, ದಿನಕ್ಕೆ ನೂರರಿಂದ ನೂರೈವತ್ತು ಕಿ.ಮೀ. ದೂರ ಕ್ರಮಿಸುತ್ತ ಅಕ್ಟೋಬರ್ ತಿಂಗಳ ಅಂತ್ಯದ ವೇಳೆಗೆ ಅಮೆರಿಕದ ಕ್ಯಾಲಿಫೋರ್ನಿಯಾ ಮತ್ತು ಮೆಕ್ಸಿಕೊ ದೇಶದ ನಿರ್ದಿಷ್ಟ ನೆಲೆಗಳನ್ನು ತಲುಪುತ್ತವೆ. ಆ ಪ್ರದೇಶಗಳ ಮಹಾ ವೃಕ್ಷಗಳ ಕಾಂಡ, ಕೊಂಬೆ, ರೆಂಬೆ ಎಲ್ಲವನ್ನೂ ಅಪ್ಪಿ, ಹೊದಿಕೆಯಂತೆ ದಟ್ಟವಾಗಿ ಆವರಿಸಿ (ಚಿತ್ರ 3) ಕೂರುತ್ತವೆ. ಶೀತ ಕಾಲ ಕಳೆವವರೆಗೂ ಆಹಾರನೀರು ಇಲ್ಲದೆ ನಿಶ್ಚಲವಾಗಿ ಚಳಿ ನಿದ್ದೆಗೆ (Hibernation) ತೊಡಗುತ್ತವೆ.




ಫೆಬ್ರುವರಿ ತಿಂಗಳಲ್ಲಿ ಬೆಚ್ಚನೆಯ ಪರಿಸ್ಥಿತಿ ಆರಂಭವಾದೊಡನೆ ಈ ಎಲ್ಲ ಚಿಟ್ಟೆಗಳೂ ಉತ್ತರದ ತಮ್ಮ ಮೂಲ ನೆಲೆಯತ್ತ ಮರುಪಯಣ ಆರಂಭಿಸುತ್ತವೆ. ಕೆಲ ದಿನಗಳಲ್ಲೇ ಆ ವೇಳೆಗೆ ಹಾದಿಯಲ್ಲಿ ಧಾರಾಳವಾಗಿ ಬೆಳೆದು ನಿಂತ ಮಿಲ್ಕ್ ವೀಡ್ ಸಸ್ಯದ ಎಲೆಗಳ ಮೇಲೆ ಮೊಟ್ಟೆ ಇಟ್ಟು ಎಲ್ಲವೂ ಸತ್ತು ಹೋಗುತ್ತವೆ. ಸ್ವಲ್ಪ ದಿನಗಳಲ್ಲೇ ಆ ಮೊಟ್ಟೆಗಳಿಂದ ಹೊರ ಬರುವ ಮರಿ ಹುಳುಗಳು (ಚಿತ್ರ 2) ಮಿಲ್ಕ್ ವೀಡ್ ಎಲೆಗಳನ್ನು ತಿಂದು ಉಳಿದ ಹಂತಗಳನ್ನು ದಾಟಿ ಪ್ರೌಢರಾಗಿ ತಮ್ಮ ತಾಯ್ತಂದೆಯರು ಆರಂಭಿಸಿದ್ದ ವಲಸೆ ಪಯಣವನ್ನು ಮುಂದುವರೆಸುತ್ತವೆ. ಕೆಲ ವಾರಗಳಲ್ಲೇ ಅವೂ ಮೊಟ್ಟೆ ಇಟ್ಟು ಮೃತವಾಗುತ್ತವೆ. ಇದೇ ಚಕ್ರ ನಾಲ್ಕು ಬಾರಿ ಮುನ್ನಡೆದು ಕಡೆಗೆ ಐದನೆಯ ತಲೆಮಾರಿನ ಚಿಟ್ಟೆಗಳು ತಮ್ಮ ಪೂರ್ವಿಕರ ಮೂಲ ನೆಲೆಯನ್ನು ತಲುಪುತ್ತವೆ! ಹೀಗೆ ಆರೇಳು ತಿಂಗಳ ದೀರ್ಘಾಯುಷ್ಯದ ಒಂದು ತಲೆಮಾರು ಮತ್ತು ಐದಾರೇ ವಾರಗಳ ಅಲ್ಪಾಯುಷ್ಯದ ನಾಲ್ಕು ತಲೆಮಾರುಗಳು ಸೇರಿ ಒಂದು ವಲಸೆ ಚಕ್ರವನ್ನು ಪೂರ್ಣಗೊಳಿಸುವ ಈ ವಿದ್ಯಮಾನವೇ ಮೊನಾರ್ಕ್ ಚಿಟ್ಟೆಗಳ ಮಹದದ್ಭುತ!

■ ಎನ್. ವಾಸುದೇವ್